# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರುರವರ ಕಛೇರಿ, ಅನೆಕ್ಸ್-1, ಕೇಂದ್ರ ಕಛೇರಿ ಆವರಣ, ಎನ್.ಆರ್. ವೃತ್ತ, ಬೆಂಗಳೂರು-560002

ಸಂಖ್ಯೆ: ಆ/ಪಿಎಸ್ಆರ್/1250/2020-21 ದಿನಾಂಕ: 04.09.2020

## ಕಛೇರಿ ಆದೇಶ

**ವಿಷಯ:** ಬೆಂಗಳೂರು ಅಂತರ್ರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿನ ಕೋವಿಡ್ ಆರೈಕೆ ಕೇಂದ್ರವನ್ನು ಮುಚ್ಚುವ ಕುರಿತು.

**ಉಲ್ಲೇಖ:** ದಿನಾಂಕ: 31.08.2020 ರಂದು ಮಾನ್ಯ ಮುಖ್ಯಮಂತ್ರಿಗಳು ರವರೊಂದಿಗೆ ನಡೆದ ಸಭೆಯ ತೀರ್ಮಾನದಂತೆ.

************

ಬೆಂಗಳೂರು ಅಂತರ್ರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿನ ಕೋವಿಡ್ ಆರೈಕೆ ಕೇಂದ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಕೋವಿಡ್-19 ಸೌಮ್ಯ ಲಕ್ಷಣಗಳುಳ್ಳ ರೋಗಿಗಳು ದಾಖಲಾಗದೇ ಇರುವುದರಿಂದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಹಾಗೂ ಟಾಸ್ಕ್ ತಂಡದ ಮುಖ್ಯಸ್ಥರು, ಕೋವಿಡ್ ಆರೈಕೆ ಕೇಂದ್ರರವರು ಸದರಿ ಕೋವಿಡ್ ಆರೈಕೆ ಕೇಂದ್ರವನ್ನು ಮುಚ್ಚಲು ಸಲಹೆ ನೀಡಿರುತ್ತಾರೆ.

ಈ ಕುರಿತಂತೆ ದಿನಾಂಕ: 31.08.2020 ರಂದು ಮಾನ್ಯ ಮುಖ್ಯಮಂತ್ರಿಗಳು ರವರೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ, ಸದರಿ ಕೋವಿಡ್ ಆರೈಕೆ ಕೇಂದ್ರದಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಖರೀದಿಸಲಾಗಿರುವ ಸ್ಟೀಲ್ ಹಾಸಿಗೆಗಳು, ಮ್ಯಾಟ್ರೆಸ್‌ಗಳು, ಪೆಡಸ್ಟಲ್ ಫ್ಯಾನ್ಸ್, ಡಸ್ಟ್ ಬಿನ್ಸ್, ಬಕೆಟ್ಸ್, ಮಗ್ಸ್ ಹಾಗೂ ವಾಟರ್ ಡಿಸ್ಪೆನ್ಸರ್ಸ್ ಇತ್ಯಾದಿ ಪೀಠೋಪಕರಣಗಳನ್ನು ಸರ್ಕಾರಿ ಸ್ವಾಮ್ಯದ ವಸತಿಗೃಹ/ಆಸ್ಪತ್ರೆಗಳಿಗೆ ಉಚಿತವಾಗಿ ನೀಡಲು ಆದೇಶಿಸಲಾಗಿರುತ್ತದೆ.

ಅದರಂತೆ ಸದರಿ ಪೀಠೋಪಕರಣಗಳನ್ನು ಈ ಕೆಳಕಂಡ ಸರ್ಕಾರಿ ಹಾಸ್ಟೆಲ್/ಆಸ್ಪತ್ರೆಗಳಿಗೆ ಹಸ್ತಾಂತರಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ.

1. ತೋಟಗಾರಿಕೆ ವಿಶ್ವವಿದ್ಯಾಲಯ (Horticulture University), ಬಾಗಲಕೋಟದಲ್ಲಿನ ಹಾಸ್ಟೆಲ್‌ಗೆ 1,000 ಪೀಠೋಪಕರಣಗಳನ್ನು ಹಸ್ತಾಂತರಿಸಲು.
2. ಸಮಾಜ ಕಲ್ಯಾಣ ಇಲಾಖೆ (Social Welfare Department) ಮತ್ತು ಬುಡಕಟ್ಟು ಕಲ್ಯಾಣ ಹಾಸ್ಟೆಲ್‌ಗಳಿಗೆ 2,500 ಪೀಠೋಪಕರಣಗಳನ್ನು ಹಸ್ತಾಂತರಿಸಲು.
3. ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (Minority Welfare Department) ಹಾಸ್ಟೆಲ್‌ಗೆ 1,000 ಪೀಠೋಪಕರಣಗಳನ್ನು ಹಸ್ತಾಂತರಿಸಲು.
4. ಜಿಕೆವಿಕೆ (ಯುಎಎಸ್), ಬೆಂಗಳೂರು ರವರಿಗೆ 1,000 ಪೀಠೋಪಕರಣಗಳನ್ನು ಹಸ್ತಾಂತರಿಸಲು.
5. ಇನ್ನುಳಿದ ಪೀಠೋಪಕರಣಗಳನ್ನು ಇತರೆ ಸರ್ಕಾರಿ ಆಸ್ಪತ್ರೆ ಮತ್ತು ಹಾಸ್ಟೆಲ್‌ಗಳಿಂದ ಬರುವ ಕೋರಿಕೆಯಂತೆ ಹಸ್ತಾಂತರಿಸಲು ಆದೇಶಿಸಿದೆ.

ಮುಂದುವರೆದು, ಬೆಂಗಳೂರು ಅಂತರ್ರಾಷ್ಟ್ರೀಯ ವಸ್ತು ಪ್ರದರ್ಶನ, ಕೋವಿಡ್ ಆರೈಕೆ ಕೇಂದ್ರದಲ್ಲಿನ ನೋಡಲ್ ಅಧಿಕಾರಿಗಳು ಸದರಿ ಕೇಂದ್ರವನ್ನು ಮುಚ್ಚಲು ಕನಿಷ್ಠ ಒಂದು ವಾರಗಳ ಸಮಯಾವಕಾಶ ನೀಡುವಂತೆ ಕೋರಿರುವುದರಿಂದ ದಿನಾಂಕ: 15.09.2020 ರಿಂದ ಸದರಿ ಕೋವಿಡ್ ಆರೈಕೆ ಕೇಂದ್ರವನ್ನು ಸಂಪೂರ್ಣವಾಗಿ ಮುಚ್ಚುವಂತೆ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಪು.ತಿ.ನೋ)

Scanned with CamScanner

**ಇವರಿಗೆ ಸೂಕ್ತ ಕ್ರಮಕ್ಕಾಗಿ:**

1. ಬೆಂಗಳೂರು ಅಂತರ್ರಾಷ್ಟ್ರೀಯ ವಸ್ತು ಪ್ರದರ್ಶನ. ಕೋವಿಡ್ ಆರೈಕೆ ಕೇಂದ್ರದಲ್ಲಿನ ನೋಡಲ್ ಅಧಿಕಾರಿಗಳಾದ ಶ್ರೀ. ಪ್ರಭು ರೆಡ್ಡಿ. ಪರೀಕ್ಷಾರ್ಥ ಸಹಾಯಕ ಆಯುಕ್ತರು ಮತ್ತು ಶ್ರೀ. ಲೋಕೇಶ್ ಡಿ.ಎಸ್. ಪರೀಕ್ಷಾರ್ಥ ಸಹಾಯಕ ಆಯುಕ್ತರು ಹಾಗೂ ಶ್ರೀ. ಪ್ರಶಾಂತ್ ಪಾಟೀಲ್. ಪರೀಕ್ಷಾರ್ಥ ತಹಶೀಲ್ದಾರ್ ರವರು ಮೇಲ್ಕಾಣಿಸಿದ ಸರ್ಕಾರಿ ಆಸ್ಪತ್ರೆ ಹಾಗೂ ಹಾಸ್ಟೆಲ್‌ಗಳಿಗೆ ಪೀಠೋಪಕರಣಗಳನ್ನು ಹಸ್ತಾಂತರಿಸಲು ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು. ಈ ಕುರಿತಂತೆ ಹಸ್ತಾಂತರಿಸಲಾಗುವ ಪೀಠೋಪಕರಣಗಳ ಸದುಪಯೋಗ ಪಡೆದುಕೊಳ್ಳಲು ಸಂಬಂಧಪಟ್ಟ ವಸತಿ ಗೃಹ/ಹಾಸ್ಟೆಲ್‌ಗಳ ಅಧಿಕಾರಿಗಳೊಂದಿಗೆ ಸಮನ್ವಯ ನಡೆಸಿ ನೇರವಾಗಿ ಪತ್ರ ಮುಖೇನ ವ್ಯವಹಾರ ನಡೆಸಿ ಪೀಠೋಪಕರಣಗಳನ್ನು ಹಸ್ತಾಂತರಿಸಲು ಹಾಗೂ ಅಲ್ಲಿ ನೆಲೆಸಿರುವ ರೋಗಿಗಳನ್ನು ಹತ್ತಿರವಿರುವ ಬೇರೆ ಕೋವಿಡ್ ಆರೈಕೆ ಕೇಂದ್ರಗಳಿಗೆ ಸಾಧ್ಯವಾದಷ್ಟು ಬೇಗನೆ ಸ್ಥಳಾಂತರಿಸಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲು ಸೂಚಿಸಿದೆ.

2. ಶ್ರೀ. ನಂದೀಶ್. ಸಹಾಯಕ ಕಾರ್ಯಪಾಲಕ ಅಭಿಯಂತರರು. ಘತ್ಯಾನಿ ಕೋಶ. ಶ್ರೀ. ಭೀಮೇಶ್ ನಾಯಕ್. ಸಹಾಯಕ ಕಾರ್ಯಪಾಲಕ ಅಭಿಯಂತರರು. ಘತ್ಯಾನಿ ಕೋಶ ಹಾಗೂ ಶ್ರೀ. ಜಗದೀಶ್. ಸಹಾಯಕ ಕಾರ್ಯಪಾಲಕ ಅಭಿಯಂತರರು. ರಸ್ತೆ ಮೂಲಭೂತ ಸೌಕರ್ಯ ರವರು ಈ ಪೀಠೋಪಕರಣಗಳ ಹಸ್ತಾಂತರ ಪ್ರಕ್ರಿಯೆ ಕುರಿತಂತೆ ಸಂಬಂಧಿಸಿದ ಇಲಾಖೆಗಳಿಂದ ಸ್ವೀಕೃತಿ ಪಡೆದು ದಾಖಲೆಗಳನ್ನು ನಿರ್ವಹಣೆ ಮಾಡಲು ಸೂಚಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು. ನಗರಾಭಿವೃದ್ಧಿ ಇಲಾಖೆರವರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಶ್ರೀ. ರಾಜೇಂದರ್ ಕುಮಾರ್ ಕಠಾರಿಯಾ. ಭಾ.ಆ.ಸೇ.. ಕಾರ್ಯದರ್ಶಿಗಳು. ತೋಟಗಾರಿಕೆ ಇಲಾಖೆ ಹಾಗೂ ಟಾಸ್ಕ್ ತಂಡದ ಮುಖ್ಯಸ್ಥರು. ಕೋವಿಡ್ ಆರೈಕೆ ಕೇಂದ್ರರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಜಂಟಿ ಆಯುಕ್ತರು (ಘತ್ಯಾನಿ) ಮತ್ತು ಟಾಸ್ಕ್ ತಂಡದ ಸದಸ್ಯರು. ಕೋವಿಡ್ ಆರೈಕೆ ಕೇಂದ್ರರವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಮುಖ್ಯ ಅಭಿಯಂತರರು. ಕೆರೆಗಳು (ಕೇಂದ್ರ ಕಛೇರಿ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಜಂಟಿ ಆಯುಕ್ತರು. ದಾಸರಹಳ್ಳಿ ವಲಯ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಅಧೀಕ್ಷಕ ಅಭಿಯಂತರರು. ದಾಸರಹಳ್ಳಿ ವಲಯ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ನಿರ್ದೇಶಕರು. ವೈದ್ಯಕೀಯ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
8. ನಿರ್ದೇಶಕರು/ಪ್ರಾಂಶುಪಾಲರು. ತೋಟಗಾರಿಕೆ ವಿಶ್ವವಿದ್ಯಾಲಯ (Horticulture University) ಬಾಗಲಕೋಟೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಕಾರ್ಯದರ್ಶಿಗಳು. ಸಮಾಜ ಕಲ್ಯಾಣ ಇಲಾಖೆ (Social Welfare Department) ಮತ್ತು ಬುಡಕಟ್ಟು ಕಲ್ಯಾಣ ಹಾಸ್ಟೆಲ್ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಕಾರ್ಯದರ್ಶಿಗಳು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (Minority Welfare Department) ಹಾಸ್ಟೆಲ್ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಜಿಕೆವಿಕೆ (ಯುಎಎಸ್). ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಂಬಂದಪಟ್ಟವರಿಗೆ/ಕಛೇರಿ ಪ್ರತಿ.

Scanned with CamScanner